ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 21st September, 1973/Bhadrapada 30, 1895 S. E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral Answers were given)

REPAIRS TO N. T. G. M. SCHOOL BUILDING AT HOSANAGAR

7. Sri S. M. SHEERNALY CHANDRASEKHAR (Hosanagar).—

Will the Minister for Education be pleased to state :—

(*a*) whether the Minister for Education visited Hosanagar in the beginning of the year 1972 (Immediately after the General Elections);

(b) if so, whether during his visit he received a petition from the Hosanagar Municipality and the public to undertake repair work of the building of N.T.G.M. School which is in a dilapidated condition ;

(c) whether the Minister had promised the public that he would arrange to undertake the work immediately ;

(d) if so, the action the Government has taken so far in this regard ?

Sri A. R. BADARINARAYANA (Minister for Education).—

(a) Yes.

(b) Yes.

(c) Yes.

(d) An estimate for repairing the building received from the Director of Public Instruction is under examination.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ನನ್ನ ಮೊದಲನೆ ೩ ಪ್ರಶ್ನೆಗಳನ್ನು ಒಪ್ಪಿಕೊಂಡಿದ್ದೀರಿ. ಅದಕ್ಕೆ ನನ್ನ ಧನ್ಯವಾದಗಳು. 'ಈ' ಪ್ರಶ್ನೆಗೆ ಉತ್ತರವಾಗಿ, ಕಟ್ಟಡ ದುರಸ್ತಿಯ ಬಗ್ಗೆ ಶಿಕ್ಷಣ ಇಲಾಖೆಯ ಸಂಚಾಲಕರಿಂದ ಬಂದ ಅಂದಾಜು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಚೀಫ್ ಇಂಜನಿಯರಿಂದ ಕಟ್ಟಿಡದ ರಿಪೇರಿ ಬಗ್ಗೆ ಮಂಜೂರಾತಿಗೆ ಸರ್ಕಾರಕ್ಕೆ ಬಂದು ನಾಲ್ಕೈದು ತಿಂಗಳಾಗಿದೆ. ಇಷ್ಟು ಕಾಲಾವಕಾಶ ಏಕೆ ಎಂದು ಕೇಳಬಹುದೇ ಸ್ವಾಮಿ?

†ಶ್ರೀ ಎ. ಆರ್. ಬದರೀನಾರಾಯಣ್.—ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿಯೆಟ್‌ನಲ್ಲಿ ಗವರ್ನ್‌ಮೆಂಟ್ ಆರ್ಡರ್ ಪಾಸಾಗಿಲ್ಲ. It is awaiting orders of Government. ಚೀಫ್ ಇಂಜನೀಯರ್ ಬರೆದಿರಬಹುದು. Sanction of Government is necessary particularly in view of the fact that economy measures are there. ಆದುದರಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ಕಟ್ಟಡಕ್ಕೆ ೧೦೦ ವರ್ಷ ಆಗಿರುವುದರಿಂದ, ಬೇಗ ರಿಪೇರಿ ಮಾಡದೇ ಹೋದರೆ, ವಿದ್ಯಾರ್ಥಿಗಳ ತಲೆ ಮೇಲೆ ಬೀಳುತ್ತದೆ. ಈ ದೃಷ್ಟಿಯಿಂದ ಆದಷ್ಟು ಜಾಗ್ರತೆ ಆರ್ಡರ ಹೊರಡಿಸುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ್.—ನಾನು ಹೋಗಿ ಬಿಲ್ಡಿಂಗ ನೋಡಿ ಕೊಂಡು ಬಂದಿದ್ದೇನೆ. ಅದು ದುಸ್ಥಿತಿಯಲ್ಲಿದೆ. ಹಣದ ಪ್ರಶ್ನೆ ಇದೆ. ಆದಷ್ಟು ಬೇಗ ಮಾಡಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದೇ ಬಿಲ್ಡಿಂಗ ಬಗ್ಗೆ ಸುಮಾರು ನಾಲ್ಕೈದು ತಿಂಗಳಿಂದ ನಾನು ಪುರಸಭಾ ಅಧ್ಯಕ್ಷರ ಜೊತೆಗೆ ಬಂದು ನಿಮ್ಮನ್ನು ಭೆಟ್ಟಿ ಮಾಡಿದೆ. ಇದನ್ನು ರಿಪೇರಿ ಮಾಡುವುದಕ್ಕೆ ಎಷ್ಟು ಕಾಲ ಆಗಬಹುದು.

ಶ್ರೀ ಎ. ಆರ್. ಬದರೀನಾರಾಯಣ್.—ಎಕಾನಮಿ ಮೆಜರನಿಂದ ಸ್ವಲ್ಪ ತೊಂದರೆ ಇದೆ. ಅದು ಬೇಗ ದುರಸ್ತಿ ಆಗಬೇಕು ಎನ್ನುವುದನ್ನು ನಾನೂ ಒಪ್ಪುತ್ತೇನೆ.

Sri H. M. CHANNABASAPPA (Minister for Public Works and Electricity)—By way of supplementing the reply, I may state that the economy order contemplates that as far as possible, spendig on unproductive works may be delayed. That is all the idea. Not that there is no need

† Indicates that the remarks or speeches have not been revised by the member concerned.

for repairing. As Hon. Minister for Education said, the Government will try to expedite it.

SHIFTING OF BANGALORE GOLF CLUB

23. Sri K. R. SRINIVASULU NAYUDU (Shanthinagar).—

Will the Minister for Public Works and Electricity be pleased to state :—

Whether there is any proposal before Government to shift the Bangalore Golf Club to some other place, preferably outside the Corporation area and making use of this place for construction of Government buildings to locate the offices which have been scattered throughout Bangalore ?

Sri H. M. CHANNABASAPPA (Minister for Public Works and Electricity).—

There is no such proposal.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನನ್ನ ಪ್ರಶ್ನೆಗೆ ಉತ್ತರವಾಗಿ, ಅಂಥ ಸಲಹೆ ಏನೂ ಇರುವುದಿಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಇರತಕ್ಕ ಪ್ರಾಕ್ಟಿಕಲ್ ಡಿಫಿಕಲ್ಟಿ ಏನು? ಅಲ್ಲಿ ಎಷ್ಟು ಜಮೀನು ಇದೆ? ಅದು ಯಾರಿಗೆ ಸೇರಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—೬೦ ಎಕರೆ ೧೫ ಗುಂಟೆ ಇರತಕ್ಕದ್ದು, ಅದು ಸರ್ಕಾರಿ ಜಮೀನು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಅದನ್ನು ಯಾರಿಗೋ ಒಬ್ಬರಿಗೆ ಲೀಸ್‌ಗೆ ಕೊಟ್ಟಿದ್ದೀರಿ ಎಂದು ಗೊತ್ತಾಯಿತು. ಈಗ ಕಟ್ಟಡಗಳ ಅಭಾವವಿರುವುದರಿಂದ ಆ ಲೀಸನ್ನು ಕ್ಯಾನ್ಸಲ್‌ಮಾಡಿ ಜಮೀನು ವಾಪಸ್ ತೆಗೆದುಕೊಳ್ಳಲು ಸರ್ಕಾರದವರು ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರ ಯಾರೋ ಒಬ್ಬರಿಗೆ ಕೊಟ್ಟಿಲ್ಲ, ಗಾಲ್ಫ್ ಕ್ಲಬ್‌ಗೆ ಲೀಸ್‌ಗೆ ಕೊಟ್ಟಿದ್ದೇನೆ. ಹಿಂದೆ ೫೦ ವರ್ಷಗಳ ಅವಧಿಗೆ ಕೊಟ್ಟಿದ್ದರು. ೧೯೪೩ ರಿಂದ ಯಾವ ದಾಖಲೆಯೂ ಇರಲಿಲ್ಲ. ೧೯೨೦ನೇ ಇಸವಿಯಲ್ಲಿ ೬೦ ಎಕರೆ ೧೫ ಗುಂಟೆ ಗಾಲ್ಫ್ ಕ್ಲಬ್‌ಗೆ ೫೦ ವರ್ಷಗಳವರೆಗೆ ಲೀಸ್‌ಗೆ ಕೊಟ್ಟಿದ್ದರು. ಈಗ ಸರ್ಕಾರ ಪುನಃ ೨-೭-೧೯೭೧ ರಲ್ಲಿ for a further period of 50 years on a rent of Rs. 100/—per year Government Order ಮೇಲೆ ಲೀಸ್‌ಗೆ ಕೊಟ್ಟಿದೆ.